<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 2018-2022

ಸಿಡಬ್ಲೂ - 9ಪಿಡಬ್ಲೂ-1

| | | |
|---|---|---|
| ಸಾಕ್ಷಿದಾರರ ಹೆಸರು | : | ಮುಫೇಸ್ ಖಾನ್ |
| ತಂದೆಯ ಹೆಸರು | : | ಜಾಫರ್ ಖಾನ್ |
| ವಯಸ್ಸು | : | 47 ವರ್ಷ |
| ಕೆಲಸ | : | ಮುಖ್ಯ ಪೇದೆ, ಸಿಸಿಬಿ |
| ವಾಸ | : | ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 26-03-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>

<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು 2019 ರಿಂದ ಇಲ್ಲಿಯವರೆಗೆ ಸಿಸಿಬಿ ಡಬ್ಲ್ಯೂ ಪಿ ಡಬ್ಲ್ಯೂ ದಳದಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. 05-11-2021 ರಂದು ಚಾಸಾ 14 ರವರು ನನಗೆ ಮತ್ತು ಚಾಸಾ 8, 10 ರಿಂದ 12 ರವರೆಗೆ ಬಾಗಲಗುಂಟೆ ಪೊಲೀಸ್ ಠಾಣೆ ಮೊಕದ್ದೆಮ ಸಂಖ್ಯೆ 127/2021 ರಲ್ಲಿ ಆರೋಪಿತರ ಪತ್ತೆಗಾಗಿ ನೇಮಕ ಮಾಡಿದ್ದು ಅದರಂತೆ ನಾವು ಉಳಿದ ಪ್ರದೇಶಗಳಲ್ಲಿ ಬಾತ್ಮಿ ಸಂಗ್ರಹಿಸಿ ಆರೋಪಿಗಳು ಬಾಗಲಗುಂಟೆ ಬಸ್ ನಿಲ್ದಾಣದ ಬಳಿ ಇರುವುದಾಗಿ ಮಾಹಿತಿ ಬಂದ ಕಾರಣ ಅಲ್ಲಿಗೆ ಬೇಟಿ ನೀಡಿ 3 ಜನ ಆರೋಪಿಗಳನ್ನು ವಶಕ್ಕೆ ಪಡೆದು ಅದೇ ದಿನ ಚಾಸಾ 4 ರವರ ಮುಂದೆ ಹಾಜರುಪಡಿಸಿರುತ್ತೇವೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಬಗ್ಗೆ ಚಾಸಾ 14 ರವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ಆರೋಪಿಗಳ ಪತ್ತೆಗಾಗಿ ನಮಗೆ ಲಿಖಿತ ಆದೇಶ ಕೊಟ್ಟಿಲ್ಲ ಮೌಖಿಕವಾಗಿ ಹೇಳಿದ್ದಾರೆ. ನಾನು ಆ ದಿನ ಕರ್ತವ್ಯದಲ್ಲಿ ಇದ್ದ ಬಗ್ಗೆ ದಾಖಲೆ ಕೊಡಲು ತೊಂದರೆ ಇಲ್ಲಾ. ಅದೇ ದಿನ ಮಧ್ಯಾನ್ನ ಆರೋಪಿಗಳ ಬಗ್ಗೆ ಬಾತ್ಮಿ ಬಂದಿತ್ತು. ಆರೋಪಿಗಳು ನಾನು ಹೇಳಿದ ಹಾಗೇ ಸ್ಥಳದಲ್ಲಿ ಇರಲಿಲ್ಲ ಮತ್ತು ಅವರನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯಲ್ಲಿ ಸಹಿ ಇರುವುದಿಲ್ಲ.

ಆರೋಪಿಗಳ ಪತ್ತೆಗಾಗಿ ನನ್ನನ್ನು ನೇಮಕ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಬಾತ್ಮಿದಾರರ ಹೆಸರುಗಳನ್ನು ಹೇಳಲಾಗುವುದಿಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ